


ಬೆಳಗಾಗೆದ್ದಾಗ ಇಡೀ ದೃಶ್ಯವೇ ಬದಲಾಗಿಬಿಟ್ಟಿತ್ತು. ಪಂಚತಾರಾ ಹೋಟೆಲಿನಲ್ಲಿ ಪವಡಿಸಿದ ಕನಸು ಕಾಣುತ್ತಿದ್ದ ಆತ ಬೆಳಗಾಗುವಾಗ ತನ್ನ ಈಗಿನ ಒಂದು ಕೊಠಡಿಯ ಶೆಡ್ಡಿನಂತಹ ಮನೆಯಲ್ಲಿದ್ದ.

ಥತ್... ವೈಭವದ ಕಾಲ ಕಳೆದು ದಶಕಗಳೆ ಆದರೂ ಕನಸುಗಳಿಗೇನೂ ಬರವಿಲ್ಲ ಎಂದು ಹಳಹಳಿಸಿದ.

ಎಚ್ಚರವಾದಾಗ ತನ್ನ ಸುತ್ತಲೂ ಏನೋ ಒಂದು ಕೆಟ್ಟದಾದ, ಅಹಿತಕರವೆನ್ನಿಸುವ ದುರ್ವಾಸನೆ ಸುತ್ತಿಕೊಂಡದ್ದು ಅರಿವಿಗೆ ಬಂತು. ಪರಿಶೀಲಿಸಿ ನೋಡಿದರೆ ಅದರ ಮೂಲ ಅವನ ದರಿದ್ರದ ಬಾಯಿಯೆ ಆಗಿತ್ತು. ರಾತ್ರೆ ಕುಡಿದ ಅಮಲಿನಲ್ಲಿ ಹಲ್ಲುಸೆಟ್ಟು ಕಳಚಿಡಲು ಮರೆತಿದ್ದ ಕಾರಣ ಬಾಯಿ ಅಸಾಧ್ಯವಾದ ರೀತಿಯಲ್ಲಿ ಗಬ್ಬೆದ್ದುಹೋಗಿತ್ತು. ಹಿಂದಿನ ರಾತ್ರೆ ಬಾಬಣ್ಣನ 'ಡಾಬಾ' ಎಂದು ಕರೆಸಿಕೊಳ್ಳುವ ಲಡಾಸಿ ಹೋಟೆಲಿನಿಂದ ತರಿಸಿಕೊಂಡಿದ್ದ ಮಟನ್ ಬಿರಿಯಾನಿ ಮತ್ತು ಚಿಕನ್ ಚಿಲ್ಲಿ ಹೆಸರಿನ ಪೊಟ್ಟಣಗಳನ್ನು ಬಿಡಿಸಿ ಒಂದಷ್ಟು ರಮ್ಮು ಕುಡಿಯುತ್ತಾ ತಿಂದು ಮುಗಿಸಿದ್ದ. ಸರಿಯಾಗಿ